ಸಿ. ಸಿ. ನಂ.- **706/2020**

ಸಿ.ಡಬ್ಲ್ಯೂ.- **1** / ಪಿ.ಡಬ್ಲ್ಯೂ.- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **15-06-2023** ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಹನುಮನಾಯ್ಕ |
| ತಂದೆ / ಗಂಡನ ಹೆಸರು - | ಶಂಕರ್ ನಾಯ್ಕ |
| ವಯಸ್ಸು - | 37 ವರ್ಷಗಳು |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಸೀತರಾಮ ತಾಂಡ, ಹೊಸಪೇಟೆ |

ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ-

ದಿಃ **01-11-2020** ರಂದು ಚಾ.ಸಾ 4 ಮತ್ತು 5 ರವರು ಹೊಸಪೇಟೆಗೆ ಸಾಮಾನು ಖರೀದಿ ಮಾಡಲು ಬಂದಿರುತ್ತಾರೆ. ಆಗ ಗಾಂಧಿಚೌಕ್ ಮಸೀದಿ ಹತ್ತಿರ ಚಾ.ಸಾ 4 ಮತ್ತು 5 ರವರು ನಡೆದುಕೊಂಡು ಬರುವಾಗ ಬೈಕ್ ಚಾಲಕನು ತನ್ನ ಬೈಕ್ ನ್ನು ಹಿಂದುಗಡೆಯಿಂದ ಫಾಸ್ಟಾಗಿ ಚಲಾಯಿಸಿಕೊಂಡು ಬಂದು ಚಾ.ಸಾ 4 ಮತ್ತು 5 ರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ. ಚಾ.ಸಾ 4 ರವರಿಗೆ ಕಾಲಿಗೆ ಪೆಟ್ಟಾಗಿರುತ್ತದೆ. ಚಾ.ಸಾ 5 ರವರಿಗೆ ಹೊಟ್ಟೆಗೆ ಪೆಟ್ಟಾಗಿರುತ್ತದೆ. ಸಾರ್ವಜನಿಕರು ಅವರನ್ನು ಪುತ್ತೂರು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಚಾ.ಸಾ 4 ರವರಿಗೆ ಪುತ್ತೂರು ಆಸ್ಪತ್ರೆಯಲ್ಲಿ ಮಾರನೆ ದಿನ ಆಪರೇಷನ್ ಮಾಡಿರುತ್ತಾರೆ. ಚಾ.ಸಾ 5 ರವರನ್ನು ಬೆಂಗಳೂರಿನಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ನಾನು ಬೈಕ್ ಚಾಲಕನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಪಲ್ಸರ್ ಬೈಕ್ ಚಾಲಕ ಅಲ್ಲಿ ಇದ್ದ, ಅವನ ಹೆಸರು ಹರೀಶ್, ನಾನು ಅವನನ್ನು ನೋಡಿರುತ್ತೇನೆ.

ನಾನು ದೂರು ನೀಡಿದ ನಂತರ ಪೊಲೀಸರು ಕೃತ್ಯ ಸ್ಥಳ ಪಂಚನಾಮೆ ಮಾಡಿರುತ್ತಾರೆ. ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಂತರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಜಪ್ತು ಪಂಚನಾಮೆ ಮಾಡಿ ವಾಹನ ಜಪ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿ.ಪಿ 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 1-ಎ ಎಂದು ಗುರುತಿಸಲಾಯಿತು. ಸಾಕ್ಷಿ ಕೃತ್ಯ

ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 2-ಎ ಎಂದು ಗುರುತಿಸಲಾಯಿತು. ಸಾಕ್ಷಿ ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 3-ಎ ಎಂದು ಗುರುತಿಸಲಾಯಿತು. ಸಾಕ್ಷಿ ಜಪ್ತು ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 4 ಮತ್ತು 5 ಎಂದು ಗುರುತಿಸಲಾಯಿತು.

<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ ಡಿ.ಪಿ ರವರಿಂದ-</u>

ನಾನು ಅವಿದ್ಯಾವಂತನಿರುತ್ತೇನೆ. ನನಗೆ ಅಪಘಾತದ ವಿಚಾರ ಚಾ.ಸಾ 4 ರವರು ತಿಳಿಸಿರುತ್ತಾರೆ. ಅವರು ಬೇರೆಯವರ ಫೋನ್ ಮೂಲಕ ಕರೆ ಮಾಡಿ ವಿಚಾರ ತಿಳಿಸಿರುತ್ತಾರೆ. ನಿ.ಪಿ 1 ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ಓದಲು ಬರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಚಾ.ಸಾ 4 ಮತ್ತು 5 ರವರು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿದ್ದರು ಎಂದು ಹೇಳಬಹುದಾ ಎಂದರೆ ನನಗೆ ಕರೆ ಮಾಡಿ ತಿಳಿಸಿರುತ್ತಾರೆ ಹೇಳಲಾಗುವುದಿಲ್ಲ. ನಾನು ಅವರಿಗೆ ಆ ಬಗ್ಗೆ ಕೇಳಿರುವುದಿಲ್ಲ. ಬೈಕ್ ಎಷ್ಟು ಸ್ಪೀಡ್ ಆಗಿ ಹೋಗುತಿದ್ದ ಎಂದು ನನಗೆ ಹೇಳಲಾಗುವುದಿಲ್ಲ. ಕೃತ್ಯ ಸ್ಥಳ ಜನದಟ್ಟಣೆ ಇರುವ ಪ್ರದೇಶ ಎಂದರೆ ಸರಿ. ಆ ಕಾರಣ ಅಲ್ಲಿ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಫಾಸ್ಟ್ ಆಗಿ ಕೂಡ ಹೋಗುತ್ತವೆ. ಚಾ.ಸಾ 4 ಮತ್ತು 5 ರವರನ್ನು ಆರೋಪಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬಿಟ್ಟು ಹೋಗಿರುತ್ತಾರೆ. ಅಪಘಾತ ಹೇಗೆ ಆಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಬೇರೆ ಒಂದು ಅಪಘಾತದ ವಿಚಾರದಲ್ಲಿ ಆರೋಪಿ ಸಹಾಯ ಮಾಡಲು ಹೋದಾಗ ಅವನ ವಿರುದ್ಧ ಈ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲದೆ ಇದ್ದರು ಸಹ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾ.ಸಾ 4 ಮತ್ತು 5 ರವರು ರಸ್ತೆಯ ಮೇಲೆ ಅಡ್ಡಾದಿಡ್ಡಿ ಹೋಗಿದ್ದಕ್ಕೆ ಅಪಘಾತ ಆಗಿರುತ್ತದೆ ಹೊರತು ಆರೋಪಿಯ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿಲ್ಲ ಠಾಣೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಪ್ತು ಪಂಚನಾಮೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ

ಮಾಡಿರುತ್ತೇನೆ ಎಂದರೆ ಸರಿ. ನನಗೆ ಚೆಕ್ಕುಬಂಧಿ ಹೇಳಲಾಗುವುದಿಲ್ಲ. ಪರಿಹಾರ ಪಡೆದುಕೊಳ್ಳಲು ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.